<u>ದಿನಾಂಕಃ **05-03-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿ ರವರ ಪರ ಶ್ರೀ ಜಿ.ಎಂ.ವಿ ವಕೀಲರಿಂದಃ</u>

ನಮ್ಮ ತಂದೆ 1996 ರಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ತಂದೆ ಜೀವಂತ ಇದ್ದಾಗ ನಾನು, ನನ್ನ ಅಣ್ಣಂದಿರರು ವಿಭಾಗ ಪತ್ರ ಮಾಡಿಕೊಂಡಿರುತ್ತೇವೆ. ನಾನು ಮತ್ತು ನನ್ನ ಮಕ್ಕಳು ಮಾಡಿಕೊಂಡ ವಿಭಾಗ ಪತ್ರ ದಲ್ಲಿ ನನಗೆ ಆಸ್ತಿ ಯಾವ ರೀತಿ ಬಂದಿರುತ್ತದೆ ಎಂಬುದರ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಾವು ವಿಭಾಗ ಪತ್ರದಲ್ಲಿ ನಮ್ಮ ಕುಟುಂಬಕ್ಕೆ ಎಷ್ಟು ಹಣ ಇತ್ತು ಎಂಬುದರ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸಾಕ್ಷಿ ಹಣ ಇರಲಿಲ್ಲ ಎಂದು ಉ್ತರಿಸಿರುತ್ತಾರೆ. ನನಗೆ ಅಕ್ರಮ ಸಕ್ರಮದಲ್ಲಿ ಮಂಜೂರಾದ ಆಸ್ತಿ ನಮ್ಮ ತಂದೆಯ ಕಾಲದಿಂದ ನಮ್ಮಲ್ಲಿ ಇರಲಿಲ್ಲ. 1981-82 ರಲ್ಲಿ ನಾನು ಅಲ್ಪ ವಯಸ್ಕನಾಗಿದ್ದೆ ಎಂದರೆ ಸರಿಯಲ್ಲ. ನನಗೆ ಅಕ್ರಮ ಸಕ್ರಮ ಯೋಜನೆಯಡಿ ಜಮೀನು, ನಾನು ಮತ್ತು ನನ್ನ ಅಣ್ಣತಮ್ಮಂದಿರು ವಿಭಾಗ ಮಾಡಿಕೊಂಡ ನಂತರ ಆಗಿರುತ್ತದೆ. ನಾನು ಅಕ್ರಮ ಸಕ್ರಮದಲ್ಲಿ ಕೊಟ್ಟ ಅರ್ಜಿ ವಜಾ ಆಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ವಜಾ ಆದ ಅರ್ಜಿಯನ್ನು ಮೇಲ್ಮನವಿ ಸಲ್ಲಿಸಿ ನನ್ನ ಪರ ಮಂಜೂರು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

2. ಅಕ್ರಮ ಸಕ್ರಮ ಅರ್ಜಿಯಲ್ಲಿ ನಾನು 1980-81 ರಿಂದ ಸಾಗುವಳಿ ಮಾಡುತ್ತಾ ಬಂದಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ನಾನು ಸಲ್ಲಿಸಿದ ಅಕ್ರಮ ಸಕ್ರಮ ಅರ್ಜಿ ವಜಾ ಆಗಿದ್ದು ನಾನು ಮೇಲ್ಮನವಿ ಸಲ್ಲಿಸಿ ಪುನಃ ಮಂಜೂರು ಮಾಡಿಸಿಕೊಂಡಿರುತ್ತೇನೆ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ಉತ್ತರಿಸಿರುತ್ತಾರೆ. 2018 ರಲ್ಲಿ ನಾನು ಅಕ್ರಮ ಸಕ್ರಮದಡಿ ಜಮೀನು ಮಂಜೂರು ಮಾಡುವಂತೆ ಅರ್ಜಿ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ನಾನು ಯಾವಾಗ ಕೊಟ್ಟಿದ್ದೆ ಎಂದು ನೆನಪಿಲ್ಲ ಎಂದು ಉತ್ತರಿಸಿರುತ್ತಾರೆ. ಸಾಕ್ಷಿಗೆ ಸಾಗುವಳಿ ಚೀಟಿಯ ಆನ್ ಲೈನ್ ಪ್ರತಿ ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ಸಹಿ ತಮ್ಮದು ಎಂದು

ಒಪ್ಪಿದ್ದು ಅದನ್ನು ನಿಪಿ-22 ಎಂದು ಗುರುತಿಸಲಾಯಿತು. ಅಕ್ರಮ ಸಕ್ರಮ ಅಡಿ ಜಮೀನು ಮಂಜೂರು ಮಾಡಬೇಕಾದರೆ ಕಂದಾಯ ಅಧಿಕಾರಿಗಳು ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಬಂದು ಪರಿಶೀಲನೆ ಮಾಡಿ ವರದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಗ್ರಾಮ ಲೆಕ್ಕಾಧಿಕಾರಿ ನನ್ನ ಹೇಳಿಕೆ ಮಾಡಿಕೊಂಡಿದ್ದು ಅದಕ್ಕೆ ನಾನು ಸಹಿ ಹಾಕಿರುತ್ತೇನೆ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಯ ಡಿಜಿಟಲ್ ಪ್ರತಿ ತೋರಿಸಲಾಗಿ ಅದನ್ನು ಒಪ್ಪಿ ಕೊಂಡಿದ್ದು ಅದನ್ನು ನಿಪಿ-23 ಎಂದು ಗುರುತಿಸಲಾಯಿತು.

3. ನಾನು 50 x 80 ಅಡಿ ಮನೆ ಜಾಗವನ್ನು ಮಂಜೂರು ಮಾಡುವಂತೆ ಅರ್ಜಿ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಹಳೇ ಮನೆ ಜಾಗವನ್ನು ಮಂಜೂರು ಮಾಡಿಕೊಡುವಂತೆ ಅರ್ಜಿ ಕೊಟ್ಟಿದ್ದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 7 ಅನ್ನು ನಾನು ಮತ್ತು ನನ್ನ ಮಕ್ಕಳು ವಿಭಾಗ ಮಾಡಿಕೊಳ್ಳುವ ಪೂರ್ವದಲ್ಲಿಯೇ ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ 2018 ರಲ್ಲಿ ದಾವಾ ಸ್ವತ್ತು 7 ಮಂಜೂರು ಆಗಿರುತ್ತದೆ ಎಂದರೆ ಸರಿ. ಹಿಸ್ಸಾ ಪತ್ರದಲ್ಲಿ ಮನೆ ಯಾರಿಗೆ ಹೋಗಬೇಕು ಎಂದು ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ಅದರಲ್ಲಿ ಬರೆದಿದ್ದರೆ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಹಿಸ್ಸಾ ಪತ್ರದಲ್ಲಿ ನನ್ನ ಸ್ವಯಾರ್ಜಿತ ಆಸ್ತಿಗಳು ಯಾವುವು ಇರುತ್ತವೆ ಎಂಬುದರ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ.

4. ಹಿಸ್ಸಾ ಪತ್ರವನ್ನು ವಾದಿಗೆ ಯಾವುದೇ ಆಸ್ತಿಯನ್ನು ಕೊಡಬಾರದು ಎಂಬ ಉದ್ದೇಶದಿಂದ ಅವರಿಗೆ ಮೋಸ ಮಾಡುವ ಸಲುವಾಗಿ ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಮಲ್ಲಪ್ಪ ಹೆಗ್ಗಡೆ ಮನೆಯಲ್ಲಿ ಏನು ಮಾತುಕತೆ ಆಗಿರುತ್ತದೆ ಎಂದು ನನಗೆ ನೆನಪಿರುವುದಿಲ್ಲ. ಮದುವೆ ಕಾಲಕ್ಕೆ ವಾದಿಗೆ ಕೊಡಬೇಕಾದ ಹಣ ಮತ್ತು ಆಸ್ತಿ ಕೊಡದಿರುವ ಕಾರಣ ಅವರ ಮನೆಯಲ್ಲಿ ಮಾತುಕತೆ ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿ ಆಸ್ತಿಯಲ್ಲಿ ಹಕ್ಕು ಇದೆ ಎಂದು ಹೇಳಿದಾಗ ನಾವು ಅವರ ಜೊತೆ ಜಗಳ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ವಾದಿಗೆ ಆಸ್ತಿಯನ್ನು ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯ ಒಳ್ಳೆತನವನ್ನು ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಗೆ ಆಸ್ತಿ ಕೊಡುತ್ತೇನೆ ಎಂದು

ಹೇಳಿ ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ